# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 361 |
| ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್. ಎನ್. (ವಿಧಾನಸಭಾ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 13-08-2025 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ವಿಜಯಪುರ ಜಿಲ್ಲೆಯಲ್ಲಿ ಹಾದುಹೋಗುವ ರಾಜ್ಯ ಹೆದ್ದಾರಿ-41 ನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; (ಸಂಪೂರ್ಣ ಮಾಹಿತಿ ಒದಗಿಸುವುದು) | ವಿಜಯಪುರ ಜಿಲ್ಲೆಯಲ್ಲಿ ಹಾದುಹೋಗುವ ರಾಜ್ಯ ಹೆದ್ದಾರಿ-41ನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಿಸಲು 2016-17 ನೇ ಸಾಲಿನಲ್ಲಿ ಕೇಂದ್ರ ಭೂ-ಸಾರಿಗೆ ಮಂತ್ರಾಲಯ, ನವದೆಹಲಿ ಇವರಿಂದ ತಾತ್ವಿಕವಾಗಿ ಅನುಮೋದನೆಗೊಂಡು, ವಿಸ್ತೃತ ಯೋಜನಾ ವರದಿ ತಯಾರಿಸಲು ಸಮಾಲೋಚಕರಾದ ಸಾಟ್ರಾ ಕನ್ಸಲ್ಟಂಟ್ ರವರಿಗೆ ವಹಿಸಿಕೊಡಲಾಗಿತ್ತು. ಅದರಂತೆ ಸಂಯೋಜಕರು ಕೂಡಾ ವಿಸ್ತೃತ ಯೋಜನಾ ವರದಿಯನ್ನು ಪ್ರಾರಂಭಿಸಿ ಪಂಕ್ತೀಕರಣ ಅನುಮೋದನೆಗೊಂಡು ಆರಂಭಿಕ ವರದಿಯನ್ನು ಕೂಡಾ ಸಲ್ಲಿಸಿರುವರು.<br>ಆದರೆ ಮೇಲಿನ ರಾಜ್ಯ ಹೆದ್ದಾರಿಯನ್ನು ಕಾರಣಾಂತರಗಳಿಂದ ಸ್ಥಗಿತಗೊಳಿಸಿ ಅವಧಿ ಪೂರ್ವ ಮುಕ್ತಾಯಗೊಳಿಸಲು ಕೇಂದ್ರ ಭೂ-ಸಾರಿಗೆ ಮಂತ್ರಾಲಯದಿಂದ ದಿನಾಂಕ:24-06-2021 ರಂದು ಸೂಚಿಸಿದ್ದು, ಅದರಂತೆ ಅವಧಿಪೂರ್ವ ಮುಕ್ತಾಯಗೊಳಿಸಲಾಗಿದೆ. |
| ಆ) | ಶಿರಾಡೋಣದಿಂದ ಲಿಂಗಸೂರಿಗೆ ಸಂಪರ್ಕ ಕಲ್ಪಿಸುವ ರಾಜ್ಯಹೆದ್ದಾರಿ-41 ಮೇಲ್ದರ್ಜೆಗೆ ಯಾವ ಕಾಲಮಿತಿಯಲ್ಲಿ ಏರಿಸಲಾಗುವುದು; (ಸಂಪೂರ್ಣ ಮಾಹಿತಿ ಒದಗಿಸುವುದು) | |
| ಇ) | ರಾಜ್ಯ ಹೆದ್ದಾರಿ-41 ಮೇಲ್ದರ್ಜೆಗೇರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ಸಂಪೂರ್ಣ ಮಾಹಿತಿ ಒದಗಿಸುವುದು) | |

ಕಡತ ಸಂಖ್ಯೆ: ಲೋಇ 315 ಸಿಎನ್‌ಹೆಚ್ 2025 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು